ನೂಕುನುಗ್ಗಲಾಗಿ ಬ್ಯಾಂಕಿನವರು ಅವರ ಕೆಲಸದ ವೇಳೆಯಲ್ಲಿ ಎಲ್ಲರಿಂದಲೂ ಠೇವಣಿ ಕಟ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಹಾಗಾಗಿ ಸಾವಿರಾರು ಜನ ರೈತರು ಏನು ಹೇಳ್ತು ಕಡಿಮೆ 25 ಸಾವಿರ ಹೆಕ್ಟೇರ್‌ನಲ್ಲಿ ಸೂರ್ಯಕಾಂತಿ, ಜೋಳ, ನೆಲಗಡಲೆ, ರಾಗಿ, ಬಿತ್ತನೆ ಮಾಡಿ ಬೆಳೆಲರಾಗಿದ್ದಾರೆ, ನಮ್ಮ ಈ ಎರಡು ತಾಲ್ಲೂಕುಗಳಲ್ಲಿ ಮುಂಗಾರು ಸಂಪೂರ್ಣ ಬೆಳೆಲವಾಗಿ ಎಲ್ಲರೂ ಕೂಡ ಈ ಏಮಾ ಯೋಜನೆ ಆಶಾದಾಯಕವಾಗಿದ್ದು ಇದರಲ್ಲಿ ನಾವು ಅರ್ಜಿ ಸಲ್ಲಿಸಿಕೊಂಡು ಒಂದಷ್ಟು ಏಮಾ ಹಣವಾದರೂ ಪಡೆಯಬಹುದು ಎಂಬ ದೃಷ್ಟಿಯಿಂದ ಅರ್ಜಿ ಸಲ್ಲಿಸುವುದಕ್ಕೆ ಬಹಳ ಒತ್ತಡ ತರುತ್ತಿದ್ದಾರೆ. ಇದಕ್ಕೆ ನಿಗದಿಪಡಿಸಲಾಗಿದ್ದ ಕಾಲಾವಕಾಶ 31ನೇ ತಾರೀಖಿಗೆ ಮುಗಿದಿರುವುದರಿಂದ ನಿನ್ನೆ ಮತ್ತು ಇವತ್ತು ಎರಡೂ ತಾಲ್ಲೂಕುಗಳಲ್ಲಿ ತಾಲ್ಲೂಕು ಕಚೇರಿ ಮುಂದೆ ಸಾವಿರಾರು ರೈತರು ತಮ್ಮ ಅರ್ಜಿಗಳನ್ನು ಸ್ವೀಕರಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಇನ್ನೊಂದು ತಿಂಗಳು ಕಾಲಾವಕಾಶವನ್ನು ಸರ್ಕಾರ ವಿಸ್ತರಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಒಂದು ಭರವಸೆಯನ್ನು ಸರ್ಕಾರ ಕೊಟ್ಟರೆ ಬೇರೆ ಕಾನೂನು ವ್ಯವಸ್ಥೆಗೆ ತೊಂದರೆಯಾಗದ ಹಾಗೆ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಬೆಳೆ ಏಮಾ ಬಗ್ಗೆ ಕಾಲಾವಕಾಶವನ್ನು ಇನ್ನೂ ಒಂದು ತಿಂಗಳು ವಿಸ್ತರಣೆ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಇದಕ್ಕೆ ನನ್ನ ವಿರೋಧ ಇಲ್ಲ. ಇದನ್ನು ಕೇಂದ್ರ ಸರ್ಕಾರ ಮಾಡಬೇಕೋ, ರಾಜ್ಯಸರ್ಕಾರ ಮಾಡಬೇಕೋ? ನಮ್ಮ ವ್ಯಾಪ್ತಿಯಲ್ಲಿದ್ದರೆ ನೋಡಿ ಎಂದು ಹೇಳುತ್ತೇನೆ. ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ ಮತ್ತು ನಿಮ್ಮ ಪರವಾಗಿ ನಾನು ವಾದ ಮಾಡುತ್ತೇನೆ.

(ಇ) ಬೆಂಗಳೂರಿನಲ್ಲಿ ಶ್ರೀರಾಮಚಿಟ್‌ಫಂಡ್ ಹಾಗೂ ಇತರ ಚಿಟ್‌ಫಂಡ್ ಕಂಪನಿಗಳಿಂದ ನಿಯಮಗಳ ಉಲ್ಲಂಘನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ (ಕಡೂರು): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಈ ಚಿಟ್‌ಫಂಡ್ ಕಂಪನಿಗಳ ಹಾವಳಿ ಬಹಳವಾಗಿದೆ. ಈ ಚಿಟ್‌ಫಂಡ್ ಕಂಪನಿಗಳು ಯಾವುದೇ ರೀತಿಯ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿಲ್ಲ. ಇವತ್ತು ಶ್ರೀರಾಮ್ ಚಿಟ್‌ಫಂಡ್‌ನವರು ಹೆಚ್ಚು ಕಡಿಮೆ 58 ಗುಂಪುಗಳನ್ನು ಮಾಡಿ ಇಲಾಖೆಯ ಪೂರ್ವಾನುಮತಿ ಇಲ್ಲದೇನೆ, ಸರ್ಕಾರದ ಅನುಮತಿ ಇಲ್ಲದೆಯೇ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದು, ಆ ಹಣವನ್ನು ತಮಿಳುನಾಡಿನವರು ದೋಚಿಕೊಂಡು ಹೋಗುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಏನೋ

ಗೊತ್ತಿಲ್ಲ. ಹರಾಜಿನಲ್ಲಿ ಕೂಗಬೇಕಾದರೆ ಅವರು ಚಿಟ್‌ಫಂಡ್ ಗುಂಪಿನ ಸದಸ್ಯನಾಗಿರಬೇಕು. ಆದರೆ ಅವರು ಸದಸ್ಯರಲ್ಲದಿದ್ದರೂ ಕೂಡ ಅವರಿಗೆ ಬೆಟ್‌ನಲ್ಲಿ ಕೂಗಲಿಕ್ಕೆ ಅವಕಾಶ ಇರುತ್ತದೆ. ಆದರೆ ಅವರಿಗೆ ತೆಗೆದುಕೊಂಡು ಹೋಗುವ ಹಣಕ್ಕೆ ಭದ್ರತೆ ಕೂಡ ಏನೂ ಇರುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಬಯಸುತ್ತೇನೆ. ಹಾಗೆ ಮಾಡಬೇಕಾದರೆ ಮಂಜೂರಾತಿ ಆದೇಶವನ್ನು ಪಿ.ಎಸ್.ಓ. ಅವರಿಂದ ಕಂಪನಿಯವರು ಪಡೆದಿರಬೇಕೆಂದು ಇದೆ. ಆದರೆ ಅದು ಯಾವುದನ್ನೂ ಕೂಡ ಅವರು ಪಡೆದಿರುವುದಿಲ್ಲ. ಈ ಬಗ್ಗೆ ಅವಶ್ಯಕವಾದ ದೃಢೀಕರಣ ಪತ್ರ ಕೂಡ ಅವರ ಹತ್ತಿರಪಿರುವುದಿಲ್ಲ. ಬೆಂಗಳೂರಿನ ಮೂರು ನಾಲ್ಕು ಚಿಟ್‌ಫಂಡ್ ಕಂಪನಿಗಳು ನಿಯಮಗಳನ್ನು ಉಲ್ಲಂಘನೆ ಮಾಡಿದ್ದರ ಬಗ್ಗೆ ಇಲಾಖೆಯಿಂದ ನೋಟೀಸ್ ಕೂಡ ಕೊಟ್ಟಿದ್ದಾರೆ. 'ಶ್ರೀರಾಮ್ ಚಿಟ್‌ಫಂಡ್ - ಆರ್.ಟಿ.ನಗರ ಶಾಖೆಯ ಪರಿಪೀಕ್ಷಣೆ ಉಲ್ಲೇಖ 1ರ ಆದೇಶದನ್ವಯ ಕೈಕೊಂಡ ಉಲ್ಲೇಖ ಎಂದು ಇದೆ. ಈ ತರಹ ಕೊಟ್ಟಿದ್ದರೂ ಕೂಡ ಸಹಕಾರ ಸಂಘ ಇಲಾಖೆಯ ಅಧಿಕಾರಿಗಳು ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿರುವುದಿಲ್ಲ. ಆದರೆ ಇಂತಹ ನಾಲ್ಕೈದು ಚಿಟ್‌ಫಂಡ್ ಕಂಪನಿಗಳು ಅವ್ಯವಹಾರಗಳನ್ನು ಮಾಡುತ್ತಲೇ ಇದ್ದಾವೆ. ಇದೂ ಕೂಡ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಆದರೂ ಕೂಡ ಇದರ ಬಗ್ಗೆ ಇನ್ನೂ ಏಕೆ ಕ್ರಮ ತೆಗೆದುಕೊಂಡಿಲ್ಲವೆಂದು ನಾನು ತಮ್ಮ ಮೂಲಕ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ. ತಮ್ಮ ಇಲಾಖೆಯಿಂದ ನೋಟೀಸ್ ಹೋಗಿದೆ. ಇದು ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಆದ್ದರಿಂದ ನಾನು ಮಾನ್ಯ ಸಹಕಾರ ಮಂತ್ರಿಗಳ ಗಮನ ಸೆಳೆಯುತ್ತೇನೆ. ಬೆಂಗಳೂರಿನಲ್ಲಿ ಇಂತಹ ಚಿಟ್‌ಫಂಡ್‌ಗಳಲ್ಲಿ ಕೋಟ್ಯಾಂತರ ರೂಪಾಯಿ ಸಾರ್ವಜನಿಕರ ದುಡ್ಡು ದುರುಪಯೋಗವಾಗುತ್ತಿದ್ದರೂ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು): ಮಾನ್ಯ ಸದಸ್ಯರು ಏನು ನಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ ಮತ್ತು ನಾವು ಈಗಾಗಲೇ ನೋಟೀಸ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ, ಮಾನ್ಯ ಸದಸ್ಯರು ಈಗ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಬೇಕಾದರೆ ಒಂದು ವಿವರವಾದ ಹೇಳಿಕೆಯನ್ನು ಅಧಿವೇಶನ ಮುಗಿಯುವುದರೊಳಗೆ ನಾನು ಕೊಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಅಧ್ಯಕ್ಷರೇ,.....

ಅಧ್ಯಕ್ಷರು: ಅವರು ವಿವರವಾದ ಸ್ಟೇಟ್‌ಮೆಂಟ್ ಕೊಡುತ್ತೇನೆ ಎಂದು ಹೇಳಿದ್ದಾರೆ. ಆಮೇಲೆ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ.